ಪಾಪುವಿನ ಮದುವೆಯಾಚೆಗೆ ನಮ್ಮಿಬ್ಬರ ನಡುವೆ ಸಂವಹನವೇ ಇರಲಿಲ್ಲ. ನನಗದು ಬೇಕಾಗೂ ಇರಲಿಲ್ಲ. ಪಾಪುವನ್ನು ಚೆನ್ನಾಗಿ ಓದಿಕೊಂಡ ಅಮೆರಿಕದ ಸಾಫ್ಟ್‌ವೇರ್ ಹುಡುಗನಿಗೆ ಕೊಟ್ಟಿರೋದು ತಿಳಿದು ಸ್ವಲ್ಪ ಸಮಾಧಾನವಾಗಿತ್ತು. ಆದರೆ... ಈಗ ಪಾಪು ಎಂದರೆ ಮಾತಿಲ್ಲದೆ ಕೂತಿದ್ದಾಳೆ. ಅಂಥದ್ದೇನಾಗಿರಬಹುದು? ಎನಿಸಿತು.

“ನೋಡು, ನಿನ್ನ ಸುಶೀಲ ಅನ್ನಕ್ಕೆ ನಂಗೆ ಮನಸ್ಸು ಬರಲ್ಲ. ನಿನ್ನ ವಿಷ್ಯ ಹಾಳಾಗ್ಲಿ ಪಾಪು ಹೇಗಿದ್ದಾಳೆ? ಅವಳಿಗೆಷ್ಟು ಮಕ್ಕಳು? ಅಲ್ಲೇ ಅಮೆರಿಕಾದಲ್ಲೇ ಇದ್ದಾಳ?” ಎಂದೆ. “ಇಲ್ಲ ಇಲ್ಲೇ ಹೈದರಾಬಾದ್‌ನಲ್ಲಿದ್ದಾಳೆ. ಅವಳಿಗೆ ಒಂದು ಗಂಡು ಮಗು, ಹರ್ಷ ಅಂತ... ಈಗ ಹನ್ನೆರೆಡು ವರ್ಷ” ಎಂದಳು ಯಾವುದೇ ಉಲ್ಲಾಸವಿಲ್ಲದೆ. “ಹಂಗಾದ್ರೆ ಅಳಿಯಂದ್ರು ಇಂಡಿಯಾಗೇ ಬಂದು ಬಿಟ್ರಾ?” ಎಂದೆ. ಏನೂ ಮಾತಾಡಲಿಲ್ಲ “ಮಗುವಿನ ಫೋಟೊ ತೋರಿಸು ಹಾಗೇ ಪಾಪೂದು” ಎಂದೆ ಕಡು ವ್ಯಾಮೋಹದಿಂದ. ಅವಳ ಫೋನ್ ತೆಗೆದು ಫೋಟೊ ಗ್ಯಾಲರಿಗೆ ಹೋಗಿ ಒಂದೆರೆಡು ಫೋಟೊಗಳನ್ನು ತೋರಿಸಿದಳು. ಇಲ್ಲಿಂದ ಹೊರಡುವಾಗ ಎಂಟು ವರ್ಷವಿದ್ದ ನನ್ನ ಪಾಪು ಈಗ ಪ್ರೌಢ ಮಹಿಳೆಯಾಗಿ, ಸುಂದರ ಮಗುವಿನ ತಾಯಾಗಿ ನಗುನಗುತ್ತಾ ನಿಂತ ಫೋಟೊ ನೋಡುತ್ತಾ ಕಣ್ತುಂಬಿಕೊಂಡೆ. “ನೀನೆಲ್ಲಿದೀಯ ಈಗ?” ಎಂದೆ ಕೇಳಲೋ ಬೇಡವೋ ಎಂಬಂತೆ. “ಇಲ್ಲೇ ಬೆಂಗಳೂರಲ್ಲೇ ವಿಲ್ಸನ್ ಗಾರ್ಡನ್‌ನಲ್ಲಿ ಮನೆ” ಎಂದಳು. “ಸೋ ಈಗ ನೀವಿಬ್ರೇನಾ ಮನೇಲಿ, ಪಾಪೂಗೆ ಮದುವೆಯಾದ್ಮೇಲೇ ನೀವಿಬ್ರೇ ಅಲ್ವಾ?” ಅಂದೆ ಸಹಜವಾಗಿ. ಪಾಪೂನ ಡೆಲಿವರಿ ಸಂದರ್ಭ ಗರ್ಭಾಶಯ ನಂಜೇರಿ ವಿಪರೀತ ರಕ್ತಸ್ರಾವವಾಗಿ ಅವಳ ಗರ್ಭಕೋಶ ತೆಗೆದುಹಾಕಿದ್ದುದರಿಂದ ಅವಳಿಗಿನ್ನೊಂದು ಮಗುವಾಗುವ ಸಂಭವವೇ ಇರಲಿಲ್ಲ.



“ಹೂಂ” ಎಂದಳು ಚುಟುಕಾಗಿ. ಅಷ್ಟರಲ್ಲಿ ಸರೋಜಮ್ಮ ತಿಂಡಿಗೆ ಕರೆದಾಗ ಇಬ್ಬರೂ ಎದ್ದು ಡೈನಿಂಗ್ ಹಾಲಿಗೆ ಹೋದೆವು. ತರಕಾರಿ ಉಪ್ಪಿಟ್ಟು ತಿನ್ನುತ್ತಾ ಸುಶೀಲೆ, “ಸರೋಜಮ್ಮಾಂತಾನ ನಿಮ್ಮ ಹೆಸರು, ಎಷ್ಟು ದಿನದಿಂದ ಇಲ್ಲಿ ಅಡಿಗೆ ಮಾಡ್ತಿದ್ದೀರ?” ಎಂದು ಕೇಳಿದಳು.